**E**nvironmental **S**ocial *Justice* & **G**overnance Initiatives
*Organization in Special Consultative Status with the Economic and Social Council since 2011*

**Environment Support Group® – Trust**
1572, 36th Cross, 100 Feet Ring Road,
Banashankari II Stage,
Bangalore 560070. INDIA
Tel: 91-80-26713559-3561
Voice/Fax: 91-80-26713316
Email: esg@esgindia.org
Web: www.esgindia.org

6ನೇ ಫೆಬ್ರವರಿ 2014

**ಪತ್ರಿಕಾ ಪ್ರಕಟಣೆ**

# ಚಳ್ಳಕೆರೆ ಅಮೃತ ಮಹಲ್ ಕಾವಲುಗಳಲ್ಲಿ ಎಲ್ಲಾ ನಿರ್ಮಾಣ ಚಟುವಟಿಕೆಗಳನ್ನು ನಿಲ್ಲಿಸುವಂತೆ ಆದೇಶಿಸಿದ ರಾಷ್ಟ್ರೀಯ ಹಸಿರು ನ್ಯಾಯಪೀಠ

ರಾಷ್ಟ್ರೀಯ ಹಸಿರು ನ್ಯಾಯಪೀಠದ (ದಕ್ಷಿಣ ಪ್ರಾಂತ್ಯ ಪೀಠ) ನ್ಯಾಯಾಧೀಶ ಶ್ರೀ ಎಂ. ಚೊಕ್ಕಲಿಂಗಂ (ಜ್ಯೂಡಿಷಿಯಲ್ ಸದಸ್ಯ) ಹಾಗೂ ಪ್ರೊ.ಡಾ. ಆರ್. ನಾಗೇಂದ್ರನ್ (ತಜ್ಞ ಸದಸ್ಯ) ಅವರು, ಚಿತ್ರದುರ್ಗಾ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಸೂಕ್ಷ್ಮ ಪರಿಸರ ಪ್ರದೇಶವಾದ ಅಮೃತ್ ಮಹಲ್ ಕಾವಲು ಹುಲ್ಲುಗಾವಲಿನಲ್ಲಿ ಹಾಲಿ ನಡೆಯುತ್ತಿರುವ ಎಲ್ಲಾ ನಿರ್ಮಾಣ ಚಟುವಟಿಕೆಗಳನ್ನು ಈ ಕೂಡಲೇ ನಿಲ್ಲಿಸುವಂತೆ ದಿನಾಂಕ: 14ನೇ ಫೆಬ್ರವರಿ 2014ರಂದು ನಿರ್ದೇಶಿಸಿದ್ದಾರೆ. ಕರ್ನಾಟಕ ಅರಣ್ಯ ಇಲಾಖೆ ಹಾಗೂ ಕೇಂದ್ರ ಪರಿಸರ ಹಾಗೂ ಅರಣ್ಯಗಳ (ಎಂಇಎಫ್) ಮಂತ್ರಾಲಯದಿಂದ ಯಾವುದೇ ಅನುಮತಿಯನ್ನು ಪಡೆಯದೆ ವಿವಿಧ ಏಜೆನ್ಸಿಗಳು ಕಾವಲು ಪ್ರದೇಶದಲ್ಲಿ ತಮಗೆ ಹಂಚಿಕೆ ಮಾಡಿದ್ದ ಭೂಪ್ರದೇಶದಲ್ಲಿ, ಅರಣ್ಯ ಪ್ರದೇಶವನ್ನು ಇತರೆ ಕಾರಣಗಳಿಗಾಗಿ ಉಪಯೋಗವಾಗುವ ನಿರ್ಮಾಣ ಚಟುವಟಿಕೆಗಳನ್ನು ಕೈಗೊಂಡಿರುವುದನ್ನು ಪ್ರಶ್ನಿಸಿ ಈ ಕೆಳಕಂಡ ಸಹಿ ಹಾಕಿರುವ ಅರ್ಜಿದಾರರು ನ್ಯಾಯಪೀಠಕ್ಕೆ ಸಲ್ಲಿಸಿದ ದೂರುಗಳಿಗೆ ಪ್ರತಿಕ್ರಿಯಿಸಿ ಹಸಿರು ನ್ಯಾಯಪೀಠ ಈ ನಿರ್ದೇಶನವನ್ನು ನೀಡಿದೆ.

ಈ ಏಜೆನ್ಸಿಗಳ ಪೈಕಿ ರಕ್ಷಣಾ ಸಂಶೋಧನೆ ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಶಸ್ತ್ರಾಸ್ತ್ರಗಳನ್ನು ಪರಿಶೀಲಿಸುವ ಹಾಗೂ ತಯಾರಿಸುವ ಯೋಜನೆಯನ್ನು ಕೈಗೊಂಡಿದ್ದು ಈ ಸಂಬಂಧ ನಿರ್ಮಾಣ ಚಟುವಟಿಕೆಗಳನ್ನು ಬೃಹತ್ ಪ್ರಮಾಣದಲ್ಲಿ ಈಗಾಗಲೇ ಕೈಗೊಂಡಿದೆ. ಈ ನಿರ್ಮಾಣ ಚಟುವಟಿಕೆಯನ್ನು ಉಲ್ಲೇಖಿಸಿರುವ ನ್ಯಾಯಪೀಠ ಈ ಕೆಳಗಿನಂತೆ ಆದೇಶಿಸಿದೆ:

> "ಅಧಿಕಾರಿಯ ಸೂಚನೆಯ ಮೇರೆಗೆ ಡಿಆರ್‌ಡಿಒದ ನ್ಯಾಯವಾದಿ/ಸಮಾಲೋಚಕರು, ನಿರ್ಮಾಣ ಚಟುವಟಿಕೆಗಳು ಮುಂದುವರೆಯುತ್ತಿವೆ ಎಂದು ತಿಳಿಸಿರುತ್ತಾರೆ. ಡಿಆರ್‌ಡಿಒ ಕೈಗೊಂಡಿರುವ ನಿರ್ಮಾಣ ಚಟುವಟಿಕೆಗಳ ಪ್ರದೇಶವು ಸಂರಕ್ಷಿತ ಅರಣ್ಯ ಪ್ರದೇಶದಲ್ಲಿದೆಯೇ ಅಥವಾ ಇಲ್ಲವೇ ಎಂಬುದನ್ನು ನ್ಯಾಯಪೀಠ ಈಗ ನಿರ್ಧರಿಸಬೇಕಿದೆ. ವಾಸ್ತವಾಂಶ ಹಾಗೂ ಸಂದರ್ಭಗಳನ್ನು ಅವಲೋಕಿಸಿದಾಗ, ನ್ಯಾಯಪೀಠದ ಮುಂದಿನ ಆದೇಶಗಳು ಬರುವವರೆಗೂ, ನಿರ್ಮಾಣ ಚಟುವಟಿಕೆಗಳನ್ನು ನಿಲ್ಲಿಸುವಂತೆ ಡಿಆರ್‌ಡಿಒಗೆ ನಿರ್ದೇಶಿಸುವುದು ಸೂಕ್ತ ಹಾಗೂ ಸರಿ ಎಂದು ಹಾಗೂ ಮುಂದಿನ ಆದೇಶಗಳನ್ನು ನೀಡುವವರೆಗೂ ನಿರ್ಮಾಣ ಚಟುವಟಿಕೆಗಳನ್ನು ನಿಲ್ಲಿಸುವಂತೆ ಡಿಆರ್‌ಡಿಒಗೆ ನಿರ್ದೇಶನಗಳನ್ನು ನೀಡಲಾಗಿದೆ."

ಈ ಪ್ರದೇಶವು, ಗ್ರೇಟ್ ಇಂಡಿಯನ್ ಬಸ್ಟರ್ಡ್ ಹಾಗೂ ಲೆಸ್ಸರ್ ಫ್ಲಾರಿಕನ್, ಬ್ಲಾಕ್ ಬಕ್‌ಗಳಂತಹ ಸಂರಕ್ಷಿತ ವನ್ಯಜೀವಿಗಳುಳ್ಳ ಸಂರಕ್ಷಿತ ಅರಣ್ಯ ಹುಲುಗಾವಲು ಪ್ರದೇಶವಾಗಿದೆ. ಜೊತೆಗೆ, ಸಾವಿರಾರು ಬುಡಕಟ್ಟು ಸಮುದಾಯಗಳ ಜನರು ಈ ಸುತ್ತಮುತ್ತಲಿನಲ್ಲಿ ವಾಸವಿದ್ದು, ಈ ಪ್ರದೇಶ ಅವರಿಗೆ ಜೀವನೋಪಾಯದ ಆಧಾರವಾಗಿದೆ. ಇಂತಹ ಸಂರಕ್ಷಿತ ಭೂಮಿಯನ್ನು ಡಿಆರ್‌ಡಿಒ ಸೇರಿದಂತೆ, ಬಾಬಾ ಅಣು ಸಂಶೋಧನಾ ಕೇಂದ್ರ (ಬಿಎಆರ್‌ಸಿ–ಅಣು ಇಂಧನ ಸಂವರ್ಧನೆ), ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್‌ಸಿ), ಭಾರತೀಯ ಅಂತರಿಕ್ಷ ಸಂಶೋಧನಾ ಕೇಂದ್ರ (ಇಸ್ರೋ), ಸಜಿಟೌರ್ (ಸೋಲಾರ್ ಪಾಂಡನ್ನು ನಿರ್ಮಿಸಲಿರುವ ಖಾಸಗಿ ಕಂಪನಿ), ಕರ್ನಾಟಕ ಗೃಹ ಮಂಡಳಿ (ಕೆಹೆಚ್‌ಬಿ–ವಿಲ್ಲಾಗಳನ್ನು ನಿರ್ಮಿಸಲು), ಇತ್ಯಾದಿ ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗಿದೆ. ಈ ಪೈಕಿ ಕೆಲವು ಏಜೆನ್ಸಿಗಳು ಈಗಾಗಲೇ ಅತೀ ಸುರಕ್ಷಿತ ಗೋಡೆಗಳು ಸೇರಿದಂತೆ ಬೃಹತ್ ನಿರ್ಮಾಣ ಚಟುವಟಿಕೆಗಳನ್ನು ಆರಂಭಿಸಿ, ಕಾವಲುಗಳಲ್ಲಿ


ESG is a Public Charitable Trust with clearance per Foreign Contribution Regulation Act and eligible for tax exemptions per Sec. 80G and 12A of the Indian Income Tax Act.

ವಾಸಿಸುವ ಜನರಿಗೆ ಈ ಪ್ರದೇಶಕ್ಕೆ ಪ್ರವೇಶವನ್ನು ನಿರ್ಬಂಧಿಸಿವೆ. ಕರ್ನಾಟಕದಲ್ಲಿ ಅತ್ಯಮೂಲ್ಯ ಅಮೃತ್‌ಮಹಲ್ ಕಾವಲುಗಳ ಪೈಕಿ ಕೇವಲ 10,000 ಎಕರೆಗಳು ಮಾತ್ರ ಉಳಿದುಕೊಂಡಿದೆ. ದೇಶಕ್ಕೆ ಸ್ವತಂತ್ರ ಬಂದ ಸಂದರ್ಭದಲ್ಲಿ ರಾಜ್ಯವು ಹಲವೆಡೆ ಒಟ್ಟು 450,000 ಎಕರೆಗಳ ಕಾವಲು ಪ್ರದೇಶಗಳನ್ನು ಮೀಸಲಿರಿಸಿತ್ತು. ಆದರೆ ಪ್ರಸ್ತುತ ಕೇವಲ 30,000 ಎಕರೆಗಳು ಮಾತ್ರ ಉಳಿದಿವೆ. ಇಂತಹ ಪರಿಸರ ವಿರೋಧಿ ಹಾಗೂ ಅಸಂಬದ್ಧ ಭೂಹಂಚಿಕೆ ಹಾಗೂ ನಿರ್ಮಾಣ ಚಟುವಟಿಕಗಳು, ಜೀವನೋಪಾಯಕ್ಕಾಗಿ ಈ ಕಾವಲು ಪ್ರದೇಶಗಳನ್ನು ಅವಲಂಭಿಸಿರುವ ಸಾವಿರಾರು ಬುಡಕಟ್ಟು ಹಾಗೂ ವಲಸೆ ಸಮುದಾಯದ ಕುಟುಂಬಗಳ ಜನರಿಗೆ ತೊಂದರೆಯನ್ನು ಒಡ್ಡಿದೆ.

ಈ ಪರಿಸರ ವಿರೋಧಿ ಚಟುವಟಿಕೆಗಳನ್ನು ಪ್ರಶ್ನಿಸಿ ಅರ್ಜಿದಾರರು ರಾಷ್ಟ್ರೀಯ ಹಸಿರು ನ್ಯಾಯಪೀಠ (ದಕ್ಷಿಣ ಪ್ರಾಂತ್ಯ)ಕ್ಕೆ ದೂರನ್ನು ಸಲ್ಲಿಸಿ, ಈ ಒಟ್ಟಾರೆ ಯೋಜನೆಗಳನ್ನು ಯಾವುದೇ ಪರಿಸರ ಹಾಗೂ ಸಾಮಾಜಿಕ ಪರಿಣಾಮಗಳನ್ನು ಅಂದಾಜಿಸಿದೆ ಕಡೆಗಣಿಸಿ ಕೈಗೊಳ್ಳಲಾಗಿದೆ. ಯಾವುದೇ ರೀತಿಯ ಪರಿಸರ ಸಂರಕ್ಷಣೆ, ಮಾಲಿನ್ಯ ನಿಯಂತ್ರಣ ಹಾಗೂ ಭೂ ಯೋಜನೆ ನಿಯಂತ್ರಣಗಳನ್ನು ಪಾಲಿಸಿಲ್ಲ ಎಂದು ದೂರಿದೆ. ಮೇಲಾಗಿ, ಈ ಇಡೀ ಯೋಜನೆಯನ್ನು ಅತ್ಯಂತ ಗೌಪ್ಯವಾಗಿ ನಡೆಸಲಾಗಿದ್ದು, ಚುನಾಯಿತ ಪ್ರತಿನಿಧಿಗಳು ಹಾಗೂ ಸಂಸ್ಥೆಗಳನ್ನು ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಿಂದ ದೂರವಿರಿಸಿ ಮಾಡಲಾಗಿದೆ.

ಈ ನಿರ್ಣಯಗಳಿಂದಾಗುವ ಪರಿಣಾಮಗಳ ಬಗ್ಗೆ ನ್ಯಾಯಪೀಠದ ಮುಂದೆ ವಾದ ಮಂಡಿಸಲಾಯಿತು. ಡಿಆರ್‌ಡಿಒ ಹಾಗೂ ಸಜಿಟೌರ್ ಯೋಜನೆಗಳಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 2013ರ ಸೆಪ್ಟೆಂಬರ್ ತಿಂಗಳಲ್ಲಿ ಅನುಮೋದನೆಯನ್ನು ನೀಡಿದೆ. ಆದರೆ, ***"ಒಂದು ವೇಳೆ ಪ್ರಸ್ತಾಪಿತ ಯೋಜನೆಗಳು ಅರಣ್ಯ ಪ್ರದೇಶ ವ್ಯಾಪ್ತಿಯೊಳಗೆ ಒಳಪಟ್ಟಿದ್ದರೆ, ಅರಣ್ಯ ಇಲಾಖೆಯಿಂದ ಅನುಮೋದನೆ ಪಡೆಯುವುದು ಅವಶ್ಯಕ,"*** ಎಂದು ಷರತ್ತನ್ನು ವಿಧಿಸಿದೆ. ಕರ್ನಾಟಕ ಅರಣ್ಯ ಕಾಯ್ದೆ, 1961ರಡಿ, ಅರಣ್ಯ ಸಂರಕ್ಷಣೆ ಕಾಯ್ದೆ, 1980 ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಗೋದಾವರ್ಮನ್ ಪ್ರಕರಣ (ಡಬ್ಲ್ಯೂಪಿ ಸಿವಿಲ್ 202/1995)ರಲ್ಲಿ, ಅಮೃತ್ ಮಹಲ್ ಕಾವಲು ಪ್ರದೇಶಗಳು ಅರಣ್ಯ ಪ್ರದೇಶಗಳೆಂದು ತಿಳಿಸಿ ಎಂಇಎಫ್ 2013ರ ಅಕ್ಟೋಬರ್‌ನಲ್ಲಿ ನ್ಯಾಯಪೀಠದಲ್ಲಿ ಹೇಳಿಕೆ ದಾಖಲಿಸಿತ್ತು. ಈ ಹಿನ್ನೆಲೆಯಲ್ಲಿ ಮಂತ್ರಾಲಯವು ಈ ರೀತಿ ಹೇಳುತ್ತದೆ: "9,473 ಎಕರೆ ಭೂ ಪ್ರದೇಶ 'ಅರಣ್ಯ' ಅಥವಾ 'ಅರಣ್ಯವಲ್ಲದ' ಭೂಮಿಯೆಂದು, ಮಾನ್ಯ ಸರ್ವೋಚ್ಚ ನ್ಯಾಯಾಲಯದ 'ಲಾಫಾರ್ಜ್ ತೀರ್ಪು ಹಾಗೂ ಕರ್ನಾಟಕ ಅರಣ್ಯ ಕಾಯ್ದೆ ಹಾಗೂ ನಿಯಮಗಳ ವಿಶ್ಲೇಷಣೆಯ ಪ್ರಕಾರ ರಾಜ್ಯ ಅರಣ್ಯ ಇಲಾಖೆ ಹಾಗೂ ಪ್ರಾದೇಶಿಕ ಮಂತ್ರಾಲಯದ ಕಛೇರಿ ಜಂಟಿ ತಪಾಸಣೆಯ ಮೂಲಕ ನಿರ್ಧರಿಸಬೇಕಿದೆ.' ಸ್ಥಳೀಯರಿಂದ ಹಲವು ಪ್ರತಿಭಟನೆಗಳು ಹಾಗೂ ಪೊಲೀಸ್ ದೂರುಗಳನ್ನು ದಾಖಲಿಸಿದಾಗ್ಯೂ ಡಿಆರ್‌ಡಿಒ ಕೂಡಲೇ ತನ್ನ ನಿರ್ಮಾಣ ಚಟುವಟಿಕೆಗಳನ್ನು ನಿಲ್ಲಸದೇ ಹಾಗೇ ಮುಂದುವರೆಸಿತು.

ಈ ನಿರ್ಮಾಣ ಚಟುವಟಿಕೆಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಷರತ್ತುಗಳನ್ನು ಉಲ್ಲಂಘಿಸಿರುತ್ತವೆ. ಈ ಹಿನ್ನೆಲೆಯಲ್ಲಿ ಅನುಮೋದನೆಯನ್ನು ಹಿಂದಕ್ಕೆ ಪಡೆದು ಕಾನೂನು ಉಲ್ಲಂಘಿಸಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಿಯಂತ್ರಕ ಏಜೆನ್ಸಿಗೆ ಸೂಚಿಸಲಾಗಿದೆ.

| | | |
|---|---|---|
| ಲಿಯೋ ಎಫ್. ಸಲ್ಡಾನಾ<br>ಸಂಯೋಜಕರು/ಟ್ರಸ್ಟಿ<br>ಎನ್ವಿರಾನ್‌ಮೆಂಟ್ ಸಪೋರ್ಟ್ ಗ್ರೂಪ್<br>ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಪೀಠದ<br>ಮುಂದಿರುವ ಅರ್ಜಿ 6/2013ರ<br>ಅರ್ಜಿದಾರರು<br>(ಪಾಟಿ–ಇನ್–ಪರ್ಸನ್) | ಭಾರ್ಗವಿ ಎಸ್. ರಾವ್<br>ಸಂಯೋಜಕರು<br>(ಶಿಕ್ಷಣ)/ಟ್ರಸ್ಟಿ,<br>ಎನ್ವಿರಾನ್‌ಮೆಂಟ್ ಸಪೋರ್ಟ್ ಗ್ರೂಪ್,<br>ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಪೀಠದ<br>ಮುಂದಿರುವ ಅರ್ಜಿದಾರ12/2013ರ<br>ಪರವಾಗಿ | ದೊಡ್ಡುಳ್ಳರ್ತಿ ಕರಿಯಣ್ಣ<br>ಅಮೃತ್ ಮಹಲ್ ಕಾವಲ್ ಹಿತರಕ್ಷಣಾ<br>ಹೋರಾಟ ಸಮಿತಿ,<br>ಚಿತ್ರದುರ್ಗಾ. |

---

ಗಮನಿಸಿ: ಈ ವಿಷಯಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು (ಪೆಟಿಷನ್‌ಗಳು, ಪ್ರತಿಕ್ರಿಯೆಗಳು ಹಾಗೂ ಆದೇಶಗಳು, ಇತ್ಯಾದಿ) ಅಂತರ್ಜಾಲತಾಣ: http://esgindia.org/resources/resources/esg-application-ngt-challenging-illegal-.html ರಲ್ಲಿ ಕಾಣಬಹುದು.


ESG is a Public Charitable Trust with clearance per Foreign Contribution Regulation Act and eligible for tax exemptions per Sec. 80G and 12A of the Indian Income Tax Act.